the matter which deals with the life of human being ಅದಕ್ಕೆ ಮಾನ್ಯ ಸಭಾಧ್ಯಕ್ಷರು ಸೂಚನೆ ಮಾಡಿದ ಹಾಗೆ ನಮ್ಮ ಅಡಿಷನಲ್ ಚೀಫ್ ಸೆಕ್ರೆಟರಿ ಅವರಿಗೆ ರೆಫರ್ ಮಾಡುತ್ತೇವೆ. ಅಂತಹ ಏನಾದರೂ ದೋಷ ಅಧಿಕಾರಿಯಿಂದ ಅಥವಾ ಕಂಪನಿಯಿಂದ ಆಗಿದ್ದರೆ ಕ್ರಮ ತೆಗೆದುಕೊಳ್ಳುತ್ತಾರೆ.

ಅಧ್ಯಕ್ಷರು : ಅವರಿಗೆಲ್ಲಾ ಡೀಟೇಲ್ಸ್ ಕೊಡಿ.

ಶ್ರೀ ಎ.ಟಿ. ರಾಮಸ್ವಾಮಿ : ನಾವು ಕೇಳಿದ ವಿಷಯಕ್ಕೆ ಸೀಮಿತವಾಗಿ ಉತ್ತರವೇ ಬರುವುದಿಲ್ಲ. ನಾವು ಏತಕ್ಕೆ ಪ್ರಶ್ನೆ ಕೇಳಬೇಕು ಹೇಳಿ? ನಾವು ಏತಕ್ಕೆ ಚರ್ಚೆ ಮಾಡಬೇಕು ಹೇಳಿ? ಈಗ ರೇಟ್ ಕಾಂಟ್ರಾಕ್ಟ್ ಲಿಸ್ಟ್ ಮಾಡಲಿಲ್ಲ. ಏಕೆ ಮಾಡಲಿಲ್ಲ? ಸರ್ಕಾರದ ಕೈಯಲ್ಲಿ ಇರಲಿಲ್ಲವೇ? ಏಕೆ ಪೆಂಡಿಂಗ್ ಇಟ್ಟುಕೊಂಡಿದೆ?

ಡಾ|| ಎಚ್.ಸಿ. ಮಹದೇವಪ್ಪ : ಈಗ ಇವರ ಬಗ್ಗೆ ಮೇಲ್ಮನೆಯಲ್ಲಿ ಒಂದು ಸದನ ಸಮಿತಿ ಮಾಡುವ ಬಗ್ಗೆ ಹೇಳಿದ್ದೇನೆ.

ಶ್ರೀ ಎ.ಟಿ. ರಾಮಸ್ವಾಮಿ : ನಾನು ಈಗ ಕೆಎಪಿಎಲ್ ವಿಚಾರ ಹೇಳಿದೆ. ನಾನು ಏನು ಪ್ರಶ್ನೆ ಕೇಳುತ್ತೇವೆ ಅದಕ್ಕೆ ಉತ್ತರ ಹೇಳುವುದೇ ಇಲ್ಲ. ಸುಮ್ಮನೆ ವೇಗ್ ಆಗಿ ಉತ್ತರ ಹೇಳಿ ಬಿಡುವುದು. ನಾವು ಏಕೆ ಪ್ರಶ್ನೆ ಕೇಳುವುದಕ್ಕೆ ಬರುತ್ತೇವೆ?

ಅಧ್ಯಕ್ಷರು : ಮಾನ್ಯ ರಾಮಸ್ವಾಮಿಯವರೆ, ಈಗ ಎನ್‌ಕ್ವೈರಿಯನ್ನೇ ಮಾಡಿಸಲು ಒಪ್ಪಿಕೊಂಡಿದ್ದಾರೆ. ವೇಗ್ ಆಗಿ ಏನು ಬಂತು?

ಅಲ್ಲೇ ಚರ್ಚೆ ಇತ್ಯರ್ಥ ಮಾಡಿಕೊಳ್ಳಬಹುದು. ಮಾನ್ಯ ವಾಟಾಳ್ ನಾಗರಾಜ್ ಅವರು ಈಗ ತಮ್ಮ ಖಾಸಗಿ ನಿರ್ಣಯದ ಮೇಲೆ ಚರ್ಚೆ ಪ್ರಾರಂಭಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಎನ್‌ಕ್ವೈರಿಯನ್ನು ಅಡಿಷನಲ್ ಚೀಫ್ ಸೆಕ್ರೆಟರಿಯವರಿಂದ ಮಾಡಿಸುತ್ತೀರಾ? ಅದನ್ನು ಹೇಳಲಿಲ್ಲ.

ಅಧ್ಯಕ್ಷರು : ಮಾನ್ಯ ಸಚಿವರೇ ಹೇಳಿ.

ಡಾ|| ಎಚ್.ಸಿ. ಮಹದೇವಪ್ಪ : ಅಡಿಷನಲ್ ಚೀಪ್ ಸೆಕ್ರೆಟರಿಯವರಿಂದ ಎನ್‌ಕ್ವೈರಿ ಮಾಡಿಸುತ್ತೇನೆ.

ಖಾಸಗಿ ನಿರ್ಣಯದ ಮೇಲೆ ಚರ್ಚೆ

ರಾಜ್ಯದಲ್ಲಿ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಈ ಸದನವು ನಿರ್ಣಯಿಸುತ್ತದೆ

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಸಭಾಧ್ಯಕ್ಷರೆ, "ರಾಜ್ಯದಲ್ಲಿ ಪಾನ ನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ಈ ಸದನವು ನಿರ್ಣಯಿಸುತ್ತದೆ". ಈ

ನಿರ್ಣಯವನ್ನು ನಾನು ಮಂಡಿಸಿದ್ದೇನೆ. ಇದು ಸಮಗ್ರವಾಗಿ ಈ ನಿರ್ಣಯದಲ್ಲಿ ಎಲ್ಲಾ ಸದಸ್ಯರನ್ನು ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ. ಚರ್ಚೆಯಲ್ಲಿ ಭಾಗವಹಿಸಬೇಕು. ನಿಮ್ಮ ಅಭಿಪ್ರಾಯ ಹೇಳಿ. ಪಾನ ನಿರೋಧ ಸರಿ ಇದೇಯೇ ಅಥವಾ ಇಲ್ಲ ಎನ್ನತಕ್ಕ ನಿಮ್ಮ ಅಭಿಪ್ರಾಯ ಹೇಳಿ. ಈ ಪ್ರಾಮುಖ್ಯವಾದಂತಹ ನಿರ್ಣಯ ಬಂದಾಗ ಈ ನಿರ್ಣಯದಲ್ಲಿ ಈ ಸದನದ ಸಂಪೂರ್ಣ ಸದಸ್ಯರು ತಾವು ಪರವಾಗಿ ಇರಬಹುದು, ವಿರುದ್ಧವಾಗ ಇರಬಹುದು. ಇದರ ಪರಿಸ್ಥಿತಿಗಳ ಬಗ್ಗೆ ಒಂದು ಚಿಂತನೆ ನಡೆದರೆ ನನಗೆ ಅನಿಸುತ್ತದೆ ಅಂತಿಮವಾಗಿ ಅದರಿಂದ ಉಪಯುಕ್ತವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೀರ್ ಪ್ರೈಸ್ ಕಡಿಮೆ ಮಾಡಬೇಕು ಎಂದು ಒಂದು ಕಡೆ ಹೇಳುತ್ತಾರೆ. ಇನ್ನೊಂದು ಕಡೆ ಇದರ ಮೇಲೆ ಭಾಷಣ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಖರ್ಗೆಯವರು ಯಾವಾಗಲೂ ದಾರಿ ತಪ್ಪಿಸುತ್ತಾರೆ. ಮುಖ್ಯಮಂತ್ರಿಗಳೇ ತಮಗೆ ಹೇಳುತ್ತೇನೆ, ಖರ್ಗೆಯವರು ಯಾವಾಗಲೂ ದಾರಿ ತಪ್ಪಿಸುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬಜೆಟ್ ಮೇಲೆ ಭಾಷಣ ಮಾಡುವಾಗ ಅವರೇ ಹೇಳಿದರು. ಬೀರ್ ಬೆಲೆ ಜಾಸ್ತಿ ಆಗಿದೆ. ನಾವು ಅನೇಕ ಸಾರಿ ಕಾಕ್‌ಟೈಲ್ ಪಾರ್ಟಿಯನ್ನು ಬೇರೆಯವರಿಗೆ ಕೊಡ ಬೇಕಾಗುತ್ತದೆ. ನಾನು ಉಪಯೋಗ ಮಾಡದೇ ಇದ್ದರೂ ಬೇರೆಯವರಿಗಾಗಿ ನಾನು ಉಪಯೋಗ ಮಾಡಬೇಕಾಗುತ್ತದೆ. ಅದಕ್ಕಾಗಿ ಇದನ್ನು ಕಡಿಮೆಮಾಡಬೇಕು ಎಂದು ಹೇಳಿ ನಿನ್ನೆ ಬಹಳ ಒತ್ತಾಯ ಪೂರ್ವಕ ಅವರು ಕೇಳಿಕೊಂಡಿದ್ದಾರೆ. ಇದು ನಮ್ಮ ಪರವಾಗಿ ಅಲ್ಲ. ಅವರಿಗೆ ಯಾರ್ಯಾರು ಬೇಕು ಅವರ ಪರವಾಗಿ ವಾದ ಮಾಡಿದ್ದಾರೆ. ನಮ್ಮ ಪರವಾಗಿ ಯಾರೂ ವಾದ ಮಾಡಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳಿದ್ದು, ಮಾನ್ಯ ವಿರೋಧ ಪಕ್ಷದ ನಾಯಕರನ್ನು ಮತ್ತೊಮ್ಮೆ ಗಮನಿಸುತ್ತೇನೆ. ನಾನು ಬೀರ್ ಕುಡಿಯುವರ ಬಗ್ಗೆ ಮಾತನಾಡಿದಾಗ ನಾನೇನು ಅವರ ಪರವಾಗಿ ಮಾತನಾಡಿದೆ ಎಂದಲ್ಲ. ನೀವು ಅವರನ್ನೂ ಬಿಟ್ಟಿಲ್ಲ. ಈಗ ಅನೇಕ ಜನ ಬೀರ್ ಕುಡಿಯುವವರ ಮೇಲೆ ಹಾಕಿರತಕ್ಕ ತೆರಿಗೆ ಸರ್ಕಾರಕ್ಕೆ ಬಹಳ ಬರುತ್ತಿದೆ. ಅವರೂ ನಿಮ್ಮ ಸರ್ಕಾರವನ್ನು ಒಂದು ರೀತಿಯಲ್ಲಿ ಬೆಂಬಲಿಸುತ್ತಿದ್ದಾರೆ, ಹಣಕಾಸನ್ನು ಕೊಡುವ ಮೂಲಕ ಬೆಂಬಲಿಸುತ್ತಿದ್ದಾರೆ. ಅವರಿಗೂ ನೀವು ತೆರಿಗೆ ಜಾಸ್ತಿ ಮಾಡಿದ್ದೀರಿ ಎಂದು ಹೇಳಿದೆನೇ ಹೊರತು ಬೀರ್ ಕುಡಿಯತಕ್ಕದ್ದು ಒಳ್ಳೆಯದು, ಅವರಿಗೆ ತೆರಿಗೆ ಕಡಿಮೆ ಮಾಡಿ ಎಂದು ಆ ತರಹ ನಾನು ಹೇಳಲಿಲ್ಲ. ಒಂದು ಹಂತದಲ್ಲಿ ನೀವು ತೆರಿಗೆಯನ್ನು ಜಾಸ್ತಿ ಮಾಡುವಾಗ ಬೀರ್ ಕುಡಿಯತಕ್ಕವರಿಗೆ ತೆರಿಗೆ ಜಾಸ್ತಿ ಮಾಡಿದ್ದೀರಿ. ನೀವು ಬೀರ್ ಫ್ರಿಯರಿಗೂ ಸಹ ತೆರಿಗೆ ಮಾಡಿದರೆ ಅವರಿಂದಲೂ ಹೆಚ್ಚಿನ ಹಣ ತೆರಿಗೆ ರೂಪದಲ್ಲಿ ಬರುತ್ತಿದೆ. ಆ ದೃಷ್ಟಿಯಿಂದ ನಿಮಗೆ ಅವರ ಮೇಲೂ ಕರುಣೆ ಬರಲಿಲ್ಲವಲ್ಲಾ ಎಂದು ನಾನು ಹೇಳಿದನೇ ಹೊರತು ನಾನು ಬೀರ್ ಕುಡಿಯುವವರ ಪರ, ನಾನೆಂದೂ ವಾದ ಮಾಡುವುದಕ್ಕೆ ಹೋಗುವುದಿಲ್ಲ. ಅದು ಸ್ಪಷ್ಟ. ಆ ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ನಿರ್ಣಯದ ಬಗ್ಗೆ ನನಗೆ ಅನಿಸುತ್ತದೆ. ಇದರ ಬಗ್ಗೆ ಸಮಗ್ರವಾಗಿ ಒಂದು ಚಿಂತನೆ ಆಗಬೇಕು. ಚಿಂತನೆ ಆಗಬೇಕಾದರೆ ಎಲ್ಲರೂ ಭಾಗವಹಿಸಬೇಕು. ಮಾನ್ಯ ಮುಖ್ಯಮಂತ್ರಿಗಳೂ ಇದರಲ್ಲಿ ಸುದೀರ್ಘವಾಗಿ ಭಾಗವಹಿಸಬೇಕು. ಇನ್ನೂ ಅನೇಕ

ವಿಚಾರವಂತರು ಇಲ್ಲಿರತಕ್ಕವರು ಭಾಗವಹಿಸಬೇಕು. ಅಧ್ಯಕ್ಷರು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಬೇಕು. ಮುಂದೆ ನಿರ್ಣಯದ ವಿಚಾರ ಏನೇ ಆಗಲಿ. ತಾವು ಆ ನಿರ್ಣಯ ಒಪ್ಪಬಹುದು ಅಥವಾ ಬಿಡಬಹುದು. ಅದರ ಬಗ್ಗೆ ಅಲ್ಲ. ಇಂತಹ ಒಂದು ಅಮೂಲ್ಯವಾದಂತಹ ನಿರ್ಣಯದ ಬಗ್ಗೆ ಸಮಗ್ರವಾದ ಚಿಂತನೆ ಆದರೆ ಇದೊಂದು ಅಮೂಲ್ಯವಾದಂತಹ ಚಿಂತನೆ ಆಗುತ್ತದೆ. ಮುಂದೆ ಇದು ದಾರಿ ದೀಪವಾಗುತ್ತದೆ. ಇದು ಬಹುಶಃ ನಮ್ಮ ರಾಜ್ಯ ಒಂದೇ ಅಲ್ಲ, ಇಡೀ ದೇಶದಲ್ಲಿ ಈ ನಮ್ಮ ಶಾಸನಸಭೆ ತಮ್ಮ ಅಮೂಲ್ಯವಾದ ಸಲಹೆಗಳನ್ನು ಬೇರೆ ಬೇರೆ ಶಾಸನಸಭೆಗಳು ಮತ್ತು ಲೋಕಸಭೆ ಸಹ ತೆಗೆದುಕೊಳ್ಳತಕ್ಕಂಥಹ ಪರಿಸ್ಥಿತಿ ನಿರ್ಮಾಣ ಆಗುತ್ತದೆ ಎನ್ನತಕ್ಕದ್ದು ನನ್ನ ಪ್ರಾಮಾಣಿಕವಾದ ಅನಿಸಿಕೆ. ಆ ದೃಷ್ಟಿಯಿಂದ ಈ ಒಂದು ನಿರ್ಣಯಕ್ಕೆ ಸಾಕಷ್ಟು ಚರ್ಚೆಗೆ ಅವಕಾಶ ಕೊಡಲು ತಾವು ಸಿದ್ಧರಿದ್ದೀರಿ. ಸಾಕಷ್ಟು ಚರ್ಚೆ ಆಗಬೇಕಾಗಿದೆ. ಇದಾಗಲಿಲ್ಲ ಎಂದರೆ ನಾನು ಏನೋ ಒಂದು ನಿರ್ಣಯವನ್ನು ಮಂಡಿಸಿದ್ದೇನೆ. ಆ ನಿರ್ಣಯವನ್ನು ಮತಕ್ಕೆ ಹಾಕುವುದು. ನಾನೊಬ್ಬ ಅದಕ್ಕೆ ಪರ ಮಾಡಬಹುದು ಕೆಲವರು ವಿರೋಧ ಮಾಡಬಹುದು. ಪರ ವಿರೋಧ ಎನ್ನುವುದಕ್ಕಿಂತ ಹೆಚ್ಚಾಗಿ ಈ ನಿರ್ಣಯಬೇಕೇ. ಮತ್ತು ಇದನ್ನು ತರುವುದಕ್ಕೆ ಸಾಧ್ಯವೇ ಸಾಧ್ಯವಿಲ್ಲವೇ? ಇವತ್ತಿನ ಪರಿಸ್ಥಿತಿಯಲ್ಲಿ ದೇಶದ ಪರಿಸ್ಥಿತಿಯಲ್ಲಿ ಇವತ್ತಿನ ಪರಿಸ್ಥಿತಿಯಲ್ಲಿ ಪಾನ ನಿರೋಧವನ್ನು ಜಾರಿಗೆ ತರಲು ಸಾಧ್ಯವೇ ಸಾಧ್ಯವಿಲ್ಲವೇ ಎನ್ನತಕ್ಕ ಬಗ್ಗೆ ಅನೇಕ ವಿಶ್ಲೇಷಣೆಗಳನ್ನು ಮಾಡಬೇಕು. ಇವತ್ತಿನ ಐವತ್ತನೇ ವರ್ಷದ ಸ್ವಾತಂತ್ರದ ಈ ಸಂದರ್ಭದಲ್ಲಿ ಅವತ್ತು ಮಹಾತ್ಮ ಗಾಂಧಿಯವರು ಮಾತನಾಡಿದಂತಹ ಮಾತುಗಳು, ಇವತ್ತು ಅದು ಸತ್ಯವಾಗಿ ಬರಲು ಸಾಧ್ಯವೇ ಅಥವಾ ಸಾಧ್ಯವಿಲ್ಲವೇ? ಇವತ್ತಿನ ಪರಿಸ್ಥಿತಿ ಏನು ಎನ್ನುವ ಬಗ್ಗೆ ಒಂದು ಸಮಗ್ರವಾದ ಚಿಂತನೆ ಮತ್ತು ನಮ್ಮ ದೇಶದಲ್ಲಿ ಯಾವ್ಯಾವ ರಾಜ್ಯಗಳು ಪಾನ ನಿರೋಧವನ್ನು ಜಾರಿಗೆ ತಂದಿದೆ. ಮತ್ತು ಕರ್ನಾಟಕ ರಾಜ್ಯದ ಪರಿಸ್ಥಿತಿ ಏನು? ಬೇರೆ ದೇಶಗಳಲ್ಲಿ ಪಾನ ನಿರೋಧದ ಬಗ್ಗೆ ಇರತಕ್ಕ ವಿಚಾರಗಳು ಏನು? ಇದೆಲ್ಲಾ ಚಿಂತನ ಮಂಥನ ಆಗಬೇಕಾದಂತಹದು ಅತಿ ಮುಖ್ಯವಾಗಿ ಆಗಬೇಕಾಗಿದೆ. ಆ ದೃಷ್ಟಿಯಿಂದ ತಮಗೆ ನಾನು ಹೇಳುತ್ತೇನೆ. ಅನೇಕರು ಇದೇ ಸದನದಲ್ಲಿ ಆದರ್ಶವನ್ನು ಮಾಡಿದ್ದಾರೆ. ಈ ದೇಶದ, ಈ ರಾಜ್ಯದ ಹಿರಿಯ ಮುಖಂಡರಾದಂತಹ ಶ್ರೀ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಅವರ ಸಚಿವ ಸಂಪುಟಕ್ಕೆ ಶ್ರೀಮತಿ ಯಶೋದರಮ್ಮ ದಾಸಪ್ಪ ಎನ್ನತಕ್ಕವರು ಸೇರಿದಾಗ ಅವತ್ತು ಆ ಸಚಿವ ಸಂಪುಟಕ್ಕೆ ಸೇರುವುದಕ್ಕೆ ಮೊದಲ ಆದ್ಯತೆ ಹೇಳಿದರು, ಪಾನ ನಿರೋಧವನ್ನು ಜಾರಿಗೆ ತರುವುದಾದರೆ ನಾನು ತಮ್ಮ ಸಚಿವ ಸಂಪುಟದಲ್ಲಿರುತ್ತೇನೆ. ಬಿ. ರಾಚಯ್ಯನವರು ಮಂತ್ರಿಯಾಗಿದ್ದಾಗ ಅವರೂ ಅದನ್ನು ಹೇಳಿದರು. ಪಾನ ನಿರೋಧವನ್ನು ಜಾರಿಗೆ ತರುವುದಾದರೆ ನಾನು ಸಚಿವ ಸಂಪುಟದಲ್ಲಿರುತ್ತೇನೆಂದರು. ಅಂತಿಮವಾಗಿ ಪಾನ ನಿರೋಧವನ್ನು ಜಾರಿಗೆ ತರಲಿಲ್ಲ. ಆಗ ಯಶೋದರಮ್ಮ ದಾಸಪ್ಪನವರು ನೇರವಾಗಿ ರಾಜೀನಾಮೆ ಕೊಟ್ಟರು. ಇದು ಇತಿಹಾಸದಲ್ಲಿದೆ. ಬಿ. ರಾಚಯ್ಯನವರು ಆ ಯಳಂದೂರು ತಾಲ್ಲೂಕಿಗೆ ನನ್ನ ಕ್ಷೇತ್ರಕ್ಕಾದರೂ ಒಂದು ಪಾವಿತ್ರ್ಯತೆ ಇರಲಿ, ನನ್ನ ಕ್ಷೇತ್ರದಲ್ಲಿ ಆದರೂ ಈ ಪಾನ ನಿರೋಧವನ್ನು ಜಾರಿಗೆ ತರಬೇಕು ಎನ್ನತಕ್ಕ ಒಂದು ಆಜ್ಞೆ ಆಯಿತು. ಇದು ನನಗೆ ಜ್ಞಾಪಕ ಇರತಕ್ಕದ್ದು. ಮಾನ್ಯ ಮಂಜುನಾಥ್ ಅವರೇ, ತಾವು ನಿಜಲಿಂಗಪ್ಪನವರು ಇದ್ದಾಗ ಇದ್ದೀರಿ, ಇಲ್ಲಿ ನೀವು ಉಪಾಧ್ಯಕ್ಷರಾಗಿ ಅದನ್ನು ಬಲ್ಲಿರಿ. ಮಾನ್ಯ ಮುಖ್ಯಮಂತ್ರಿಯವರೇ ತಮ್ಮ

ಗಮನಕ್ಕೆ ತರುತ್ತಿದ್ದೇನೆ. ಅವತ್ತು ಅವರು ರಾಜೀನಾಮೆ ಕೊಟ್ಟಾಗ ಶ್ರೀಮತಿ ಯಶೋದರಮ್ಮ ದಾಸಪ್ಪನವರನ್ನು ಕ್ಯಾಬಿನೆಟ್‌ನಲ್ಲಿ ಉಳಿಸಿಕೊಳ್ಳಬೇಕೆಂದು ಬಹಳ ಸಾಹಸಪಟ್ಟರು. ಅವರು ಹೇಳಿದರು ಇಲ್ಲ ಸ್ವಾಮಿ, ಆಗುವುದಿಲ್ಲವೆಂದರು. ನಾನು ಒಂದು ನಿರ್ಣಯಕ್ಕೆ ಬಂದಿದ್ದೇನೆ; ನಾವೆಲ್ಲ ಗಾಂಧೀಜಿ ಜೊತೆಯಲ್ಲಿದ್ದವರು, ಅವರ ಜೊತೆಯಲ್ಲಿ ಬೆಳೆದಂಥವರು, ಅವತ್ತು ನಾವು ವಚನ ಕೊಟ್ಟು ಬಂದಮೇಲೆ ಅದರಂತೆ ನಡೆದುಕೊಳ್ಳಬೇಕು ಅಂದರು. ಆದುದರಿಂದ, ನಾನು ಏನು ಹೇಳುತ್ತಿದ್ದೇನೆಂದರೆ, ಅವತ್ತಿನ ಪರಿಸ್ಥಿತಿಯಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು ಅದನ್ನು ಮಾಡುತ್ತೇವೆಂದು ಹೇಳತಕ್ಕ ಒಂದು ತೀರ್ಮಾನಕ್ಕೆ ಬಂದ ಪರಿಸ್ಥಿತಿಯಲ್ಲಿ ಮಾಡುವುದಕ್ಕಾಗಲಿಲ್ಲ. ಆಗ ಅವರು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾದ ಪ್ರಸಂಗ ನಿರ್ಮಾಣವಾಯಿತು. ಶ್ರೀ ಬಿ. ರಾಚಯ್ಯನವರು ರಾಜೀನಾಮೆ ಕೊಡುತ್ತೇನೆಂದು ಹೇಳಿದಾಗ ಕೊನೆಗೆ ಅವರ ಪ್ರದೇಶಕ್ಕೆ ಮಾತ್ರ ಎಂಬ ಮಾತು ಬಂತು. ನಾವು ಇವತ್ತಿನ ದಿವಸ ಆಷಾಡಭೂತಿ ಮಾತನಾಡತಕ್ಕದ್ದು ಅಲ್ಲ. ಈ ಪಾನ ನಿರೋಧವನ್ನು ನಾವು ಜಾರಿಗೆ ತರದಿದ್ದರೆ ಈ ದೇಶದಲ್ಲಿ ರಾಜ್ಯದಲ್ಲಿ ಆಗತಕ್ಕ ಅನಾಹುತಗಳು ಏನೇನು? ಪಾನ ನಿರೋಧವನ್ನು ಜಾರಿಗೆ ತರುವುದರಿಂದ ಆಗುವ ಅನುಕೂಲಗಳು ಏನು, ಉಪಕರಣಗಳು ಏನು ಇವೆಲ್ಲವನ್ನೂ ಸಮಗ್ರವಾಗಿ ಚಿಂತನೆ ಮಾಡತಕ್ಕ ಅವಶ್ಯಕತೆ ಇವತ್ತು ಅತಿ ಮುಖ್ಯವಾಗಿ ಬಂದಿದೆ. ನನಗನ್ನಿಸುತ್ತದೆ. ಯಾರು ಏನೇ ಹೇಳಲಿ, ಒಂದು ಕಡೆ ಮದ್ಯಪಾನ ಯಾವ ಯಾವ ಹಂತದಲ್ಲಿ ನಿರಂತರವಾಗಿ ಅದು ಯಾವ ಯಾವ ಲೇಬಲಿನಲ್ಲಿ, ಯಾವ ಯಾವ ರೂಪದಲ್ಲಿ ಯಾವ ಯಾವ ಅರ್ಥದಲ್ಲಿ ಅದು ಧಾರಳವಾಗಿ ನಡೆಯುತ್ತಿದೆ. ಅದು ವ್ಯಾಪಾರವಾಗಿ ನಡೆಯತಕ್ಕದ್ದು ಉಂಟು; ವ್ಯವಹಾರಿಕವಾಗಿ ನಡೆಯತಕ್ಕದ್ದು ಉಂಟು. ಇದರ ಜೊತೆಗೆ ಕಳ್ಳಬಟ್ಟಿಯಂಥ ವಿಷ ಬೆರಸಿದಂಥ ಮದ್ಯಪಾನವೂ ಉಂಟು. ಈಗೇನೂ ಅದು ನಿಂತಿಲ್ಲ. ಇದರಿಂದ ಅದು ನಿಂತಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವು ಕಡೆ ಸಂಪೂರ್ಣ ಮದ್ಯಪಾನ ನಿಷೇಧ ಜಾರಿಗೆ ತಂದರೆ ಕಳ್ಳಬಟ್ಟಿ ಜಾಸ್ತಿಯಾಗುತ್ತದೆ. ಎಲ್ಲಾ ಕಡೆ ಕಳ್ಳಬಟ್ಟಿ ಕುಡಿಯುವುದಕ್ಕೆ ಜನರು ಹೋಗುತ್ತಾರೆಂಬ ಒಂದೇ ಒಂದು ನೆವವನ್ನು ಹೇಳುತ್ತಿದ್ದಾರೆ. ಆದರೆ ಮದ್ಯಪಾನ ನಿಷೇಧ ಮಾಡದೇ ಇರುವುದರಿಂದ ಕಳ್ಳಬಟ್ಟಿ ನಿಂತಿಲ್ಲವಲ್ಲ. ಕಳ್ಳಬಟ್ಟಿ ನಿರಂತರವಾಗಿ ಎಲ್ಲಾ ಕಡೆ ನಡೆಯುತ್ತಿದೆ. ಸ್ವಲ್ಪ ಹೆಚ್ಚು ಕಡಿಮೆ ನಮ್ಮ ರಾಜ್ಯದ ಪರಿಸ್ಥಿತಿಯನ್ನು ನಾವು ಮಾತನಾಡುವಾಗ ಅದು ಎಲ್ಲಾ ಕಡೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಹಿಂದೊಮ್ಮೆ ತಮಗೆ ನೆನಪಿರುವ ಹಾಗೆ ಇದರ ಬಗ್ಗೆ 2-3 ಗಂಟೆಗಳ ಕಾಲ ವಿಚಾರ ಮಾಡಲಾಗಿತ್ತು. ಮಾನ್ಯ ಸದಸ್ಯರ ಸಲಹೆಗಳನ್ನು ಬಹಳ ಗಹನವಾಗಿ ಚರ್ಚೆ ಮಾಡಬೇಕು. ಈ ವಿಷಯ ಏನಿದೆ ಇದು ಪ್ರಪಂಚದಲ್ಲೆಲ್ಲಾ ಇವತ್ತು ಚರ್ಚೆಗೆ ಅರ್ಹವಾದ ವಿಷಯ. ಆದರೆ ವಾಸ್ತವಿಕತೆ ಏನಿದೆ ಎಂದರೆ ಸಂಪೂರ್ಣ ಪಾನ ನಿರೋಧವನ್ನು ಅಥವಾ ಪಾನ ನಿಷೇಧವನ್ನು ಜಾರಿಗೆ ತಂದಿರತಕ್ಕ ಯಾವುದೇ ರಾಜ್ಯ ಇಲ್ಲ; ಯಾವುದೇ ರಾಷ್ಟ್ರ ಇಲ್ಲ, ಎಲ್ಲಿಯೂ ಇಲ್ಲ. ಆದುದರಿಂದ ಏತಕ್ಕೆ ಹೀಗಾಗಿದೆ ಎಂದು ಬೇಕಾದರೆ ಚರ್ಚೆಮಾಡೋಣ. ಚರ್ಚೆ ಮಾಡಿ ಸದನದ ನಿರ್ಣಯ ಅಂದರೆ ಈ ರೀತಿ ನಿರ್ಣಯ ಮಾಡುವುದು ಕಷ್ಟವಾಗುತ್ತದೆ. ಆದರೆ ಚರ್ಚೆ ಮಾಡತಕ್ಕದ್ದನ್ನು ನಾನು ಸ್ವಾಗತಿಸುತ್ತೇನೆ. ಏಕೆಂದರೆ ನಾನು ಇದರ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕೆಂದು ಇದ್ದೇ; ಆದುದರಿಂದ ಚರ್ಚೆ ಮುಂದುವರಿಯಬಹುದು.

ಶ್ರೀ ವಾಟಾಳ್ ನಾಗರಾಜ್ : ಆದುದರಿಂದ ನಾನು ತಮ್ಮಲ್ಲಿ ಇದರ ಬಗ್ಗೆ ಚರ್ಚೆ ಆಗಬೇಕು ಎಂದು ಕೇಳಿಕೊಳ್ಳುತ್ತೇನೆ. ಚರ್ಚೆಯಾಗಿ ಈ ಚರ್ಚೆಯ ಚಿಂತನೆ ಹೊರಗೆ ಬರಲಿ. ಇದು ಯಾವ ರೀತಿ ಆಗುತ್ತದೆ, ಯಾವ ರೀತಿ ಮಾಡಬಹುದು, ಬಿಡಬಹುದು, ಜಾರಿಗೆ ತರಬಹುದು ಅಥವಾ ಜಾರಿಗೆ ತರದೇ ಇರತಕ್ಕ ವಸ್ತು ಆಗಬಹುದು ಎಂಬುದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲಿ. ಇದು ಚರ್ಚೆಯ ವಸ್ತುವಾಗುವುದರಿಂದ ಅನೇಕ ವಿಚಾರಗಳು ಬೆಳಕಿಗೆ ಬರುತ್ತವೆಂಬ ಮಾತನ್ನು ಹೇಳುತ್ತಿದ್ದೇನೆ. ಇವತ್ತು ಕಳ್ಳಬಟ್ಟಿಯ ಬಗ್ಗೆ ಇಡೀ ರಾಜ್ಯದಲ್ಲಿ ಆಗಿರತಕ್ಕ ದುರಂತಗಳು ಒಂದಲ್ಲ, ಎರಡಲ್ಲ, ಸಾವಿರಾರು ದುರಂತಗಳು. ಕಳ್ಳಬಟ್ಟಿ ತಯಾರಿಕೆ ಏನಿದೆ ಇದೊಂದು ಪಿಡುಗು. ಕಳ್ಳಬಟ್ಟಿ ತಯಾರಿಕೆ ಜೊತೆಯಲ್ಲಿ ಕಳ್ಳಬಟ್ಟಿ ಸೇವನೆ ಮಾಡತಕ್ಕದ್ದು ಏನಿದೆ ಇದು ವಿಷವನ್ನೇ ಒಂದು ರೀತಿ ಕಳ್ಳತನದಲ್ಲಿ ಸೇವನೆ ಮಾಡತಕ್ಕದ್ದು. ವಿಷವನ್ನೇ ಕುಡಿಯುವುದಕ್ಕೆ ಒಂದು ಕಡೆ ವ್ಯವಸ್ಥಿತವಾಗಿ ಪ್ರೇರಣೆ ನಡೆಯುತ್ತಿದೆ. ಮತ್ತೊಂದು ಕಡೆ ಇದು ವಿಷ ಅಲ್ಲ, ಮದ್ಯಪಾನ, ಇದರಿಂದ ಸ್ವಲ್ಪ ಮತ್ತು ಬರುತ್ತದೆ ಎಂಬುದು. ಯಾವ ಯಾವ ರೀತಿ ಮತ್ತು ಬರುತ್ತದೆ, ಎಷ್ಟೆಷ್ಟು ಮತ್ತು ಬರುತ್ತದೆ, ಅದರ ಸರಾಸರಿ ಏನು, ಅಂಕಿಸಂಖ್ಯೆ ವಿಚಾರ ಬೇರೆ ಮಾತನಾಡೋಣ. ಇವತ್ತು ಪ್ರಾಮಾಣಿಕವಾಗಿ ಚಿಂತನೆ ಮಾಡುವುದಾದರೆ ಇದು ಎಲ್ಲೋ ಯಾವುದೋ ಒಂದು ಹಂತದಲ್ಲಿತ್ತು. ಬಾರ್‌ಗಳನ್ನು ತೆಗೆಯುವುದಾಗಲಿ, ಸಾರಾಯಿ ಅಂಗಡಿ ತೆಗೆಯುವುದಾಗಲಿ ಯಾವುದೇ ವಿಚಾರ ಎಲ್ಲೋ ಕೆಲವು ಕಡೆ ನಿಷೇಧ ಮಾಡಿ ಇಷ್ಟೇ ಕಡೆ ಇರಬೇಕು, ಇಂಥ ಸ್ಥಳದಲ್ಲೇ ಇರಬೇಕು, ಹೀಗೇ ಇರಬೇಕೆಂಬ ಕೆಲವು ನಿಯಮಗಳ ಮೇಲೆ ನಡೆಯುತ್ತಿತ್ತು. ಇವತ್ತು ಏನಾಗಿದೆ? ಇವತ್ತು ಸಾರೋದ್ಧಾರವಾಗಿ, ನಾಲ್ಕು ಮನೆಗಳಿರತಕ್ಕ ಹಳ್ಳಿಯಲ್ಲೂ ಒಂದೊಂದು ಅಂಗಡಿ ಇರಬೇಕು, ಸಾವಿರ ಮನೆಗಳಿರತಕ್ಕ ಹಳ್ಳಿಯಲ್ಲೂ, ಪಟ್ಟಣ ಪ್ರದೇಶಗಳಲ್ಲೂ ಹೀಗೆ ಎಲ್ಲೆಲ್ಲೂ ಇದರ ಅಂಗಡಿಗಳು, ಇದರ ಹಂಚಿಕೆ, ಇದರ ವ್ಯವಸ್ಥೆ ಒಂದು ರೀತಿಯಾಗಿ ಸಾರೋದ್ಧಾರವಾಗಿ ಎಲ್ಲಾ ಕಡೆ ಇದೆ. ಮೊದಲು ನಾನು ಗ್ರಾಮೀಣ ಪ್ರದೇಶವನ್ನು ತೆಗೆದುಕೊಂಡಾಗ ಗ್ರಾಮೀಣ ಪ್ರದೇಶದ ದುಡಿಮೆ, ರೈತರು ಇರಬಹುದು ಕಾರ್ಮಿಕರು ಇರಬಹುದು, ದುಡಿಯುವ ಮಹಿಳೆ ಇರಬಹುದು; ಆ ದುಡಿದಂಥ ಮಹಿಳೆಯ ಅಥವಾ ಪುರುಷನ ಬಹುತೇಕ ಹಣ ಎಲ್ಲಿಗೆ ಹೋಗುತ್ತದೆ? ಸಂಪೂರ್ಣವಾಗಿ ಆ ಗ್ರಾಮೀಣ ಪ್ರದೇಶದ ದುಡಿಮೆದಾರರು ಸಾರಾಯಿ ಅಂಗಡಿಗೋ, ಬಾರ್‌ಗಳಿಗೋ ಕೊಡುವುದರಿಂದ ಅವರ ಜೀವನ ಸಂಪೂರ್ಣವಾಗಿ ಹಾಳಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಇದು ಬಹಳ ಮಹತ್ವವಾದ ಗೊತ್ತುವಳಿಯಾಗಿರುವುದರಿಂದ ಇದರ ಬಗ್ಗೆ ಚರ್ಚೆ ಮಾಡೋಣವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಮಾನ್ಯ ಸದಸ್ಯರಿಗೆ ತಾವು ಅವಕಾಶ ಕೊಟ್ಟು ನಂತರ ಚರ್ಚೆಗೆ ತೆಗೆದುಕೊಳ್ಳುವುದಾದರೆ, ಅದಕ್ಕೆ ಇನ್ನೂ ಚೆನ್ನಾಗಿ ಉತ್ತರ ಕೊಡುವುದಕ್ಕೆ ಬೇಕಾದ ಸಾಮಗ್ರಿಗಳನ್ನು ನಾನು ತರುತ್ತೇನೆಂದು ಹೇಳಿದ್ದಾರೆ. ಆದುದರಿಂದ, ಈ ತರಹ ತಾವು ಅವಕಾಶ ಕಲ್ಪಿಸಿಕೊಟ್ಟರೆ ಮಾನ್ಯ ವಾಟಾಳ್ ನಾಗರಾಜ್ ಅವರು ಮುಂದೆ ಅದನ್ನು ಪ್ರಸ್ತಾಪ ಮಾಡಬಹುದು. ಈಗ ಎಂ.ಪಿ.ಎಂ.ಗೆ ಸಂಬಂಧಪಟ್ಟ ಹಾಗೆ ಮಾನ್ಯ ಕಾನೂನು ಸಚಿವರು ಉತ್ತರ ನೀಡಲಿದ್ದಾರೆ.